**ಓ ಎಸ್ ನಂಃ 278-19**
**ಪಿ ಡಬ್ಲ್ಯೂ ಃ 2**

**ದಿಃ 16-01-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎನ್ ಕೆ ಎನ್ ವಕೀಲರಿಂದ**

4. ನಾನು ಈಗ ಬಲರಾಮ್ ಕಾರ್ಪೋರೇಟ್ ಸರ್ವಿಸಸ್ ಪ್ರೈ.ಲಿ. ನಲ್ಲಿ ಅಡ್ಮಿನಿಸ್ಟ್ರೇಟರ್ ಎಂದು ಕೆಲಸ ಮಾಡುತ್ತಿದ್ದೇನೆ. ನಾನು ಸದರಿ ಕಂಪನಿಗೆ 2006 ರಲ್ಲಿ ಸೇರಿರುತ್ತೇನೆ. ನಾನು ಈಗ ಅದೇ ಕಂಪನಿನಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಬಹುದು. ಕಂಪನಿಯಲ್ಲಿ ನನಗೆ ಸಂಬಳವನ್ನು ಬ್ಯಾಂಕ್ ಖಾತೆಯ ಮೂಲಕ ಕೊಡುತ್ತಾರೆ. ಕಂಪನಿಯಿಂದ ನನಗೆ ಹಣ ಸಂದಾಯ ಆದ ಬಗ್ಗೆ ಬ್ಯಾಂಕ್ ಸ್ಟೇಟ್‌ಮೆಂಟನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ನಾನು ಸದರಿ ಕಂಪನಿಯಲ್ಲಿ ಕೆಲಸ ಮಾಡುತ್ತಿಲ್ಲ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಾನು ಬಿಕಾಂ ಪದವಿ ಓದಿರುತ್ತೇನೆ. ನಾನು ಕಂಪನಿಯಲ್ಲಿ ಅಡ್ಮಿನಿಸ್ಟ್ರೇಷನ್ ಮತ್ತು ನಮ್ಮ ಕಂಪನಿಯ ಎಂ ಡಿಯವರಿಗೆ ಸಂಬಂದಿಸಿದ ಕೆಲಸಗಳನ್ನು ನೋಡಿಕೊಳ್ಳುತ್ತೇನೆ. ನಮ್ಮ ಕಂಪನಿ ಸೆಕ್ಯುರಿಟಿ ಮತ್ತು ಹೌಸ್ ಕೀಪಿಂಗ್ ಕೆಲಸಗಳಿಗೆ ಸಂಬಂದಿಸಿದಂತೆ ನೊಂದಣಿಯಾಗಿರುತ್ತದೆ. ವಾದಿ ಮತ್ತು ಅವರ ಹೆಂಡತಿ ಸದರಿ ಕಂಪನಿಗೆ ಡೈರೆಕ್ಟರ್ ಆಗಿರುತ್ತಾರೆ. ವಾದಿ ಕಂಪನಿಯ ಸೆಕ್ಯುರಿಟಿ ಮತ್ತು ಹೌಸ್ ಕೀಪಿಂಗ್ ಹೊರತುಪಡಿಸಿ ಬೇರೆ ಕೆಲಸಗಳನ್ನು ಮಾಡುವುದಿಲ್ಲ ಎಂದರೆ ಗೊತ್ತಿಲ್ಲ. ವಾದಿ ಕ್ರಯದ ಕರಾರು ಪತ್ರವನ್ನು ಎಲ್ಲಿ ಯಾವಾಗ ಮಾಡಿಕೊಂಡಿರುತ್ತಾರೆ ಗೊತ್ತಿದೆ.

6. ವಾದಿ ಕ್ರಯದ ಕರಾರು ಪತ್ರವನ್ನು ಮಾಗಡಿ ನೊಂದಣಿ ಕಛೇರಿಯಲ್ಲಿ ದಿನಾಂಕಃ 26-04-2014 ಎಂದು ಮಾಡಿಕೊಂಡಿರುತ್ತಾರೆ. ನಿಪಿ 1 ಆಗುವಾಗ ಸ್ಥಳದಲ್ಲಿ ನಾನು ಮತ್ತು ವಾದಿ ಇದ್ದೆವು ಪ್ರತಿವಾದಿಗಳಿಂದ ಉಮೇಶಯ್ಯ ಮತ್ತು 1 ರಿಂದ 3 ನೇ ಪ್ರತಿವಾದಿಗಳು ಇದ್ದರು. ಆ ದಿನ ನಾವು ನಿಪಿ 1 ನ್ನು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಜಿ ಪಿ ಎ ನೊಂದಣಿಯಾಗಿದ್ದು ಪ್ರತಿವಾದಿಗಳಿಗೆ ಗೊತ್ತಿಲ್ಲ ನಾವು ಅದನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸ್ವಾಧೀನತೆಯನ್ನು ಉಮೇಶಯ್ಯರವರು ವಾದಿಗೆ ಕೊಟ್ಟಿರುತ್ತಾರೆ.

7. ದಾವಾ ಆಸ್ತಿಯಲ್ಲಿ ಮಾವಿನ ಮರಗಳನ್ನು ಬೆಳೆಸಿರುತ್ತೇವೆ. ಸದರಿ ಮರಗಳನ್ನು ಉಮೇಶಯ್ಯರವರು ನೆಟ್ಟಿದ್ದರು ಎಂದರೆ ನಿಜ. ದಾವಾ ಆಸ್ತಿಯ ಸ್ವಾಧೀನತೆಯನ್ನು ನಾನು ಹೊಂದಿಲ್ಲ

ಆದರೆ ವಾದಿ ಹೊಂದಿರುತ್ತಾರೆ. ದಾವಾ ಆಸ್ತಿಯ ಖರೀದಿಗೆ ಸಂಬಂದಿಸಿದಂತೆ ನಾನು ಮತ್ತು ಕುಮಾರ್ ರವರು ಮದ್ಯವರ್ತಿಯಾಗಿ ಕೆಲಸ ಮಾಡಿರುವುದಿಲ್ಲ. ದಾವಾ ಆಸ್ತಿಯನ್ನು ಖರೀದಿಗೆ ಕುಮಾರ್ ರವರು ತೋರಿಸಿದ್ದರು. ನಿಪಿ 1ರ ನೊಂದಣಿಗೆ ಫೀಜನ್ನು ನಾನು ಕೊಟ್ಟಿಲ್ಲ ವಾದಿ ಕೊಟ್ಟಿರುತ್ತಾರೆ. ಆದ ಕಾರಣ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ವಿಷಯ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ.

8. ದಾವಾ ಆಸ್ತಿಯನ್ನು ನಾನು ನೋಡಿಕೊಳ್ಳುತ್ತಿದ್ದುದರಿಂದ ಮತ್ತು ನನಗೆ ದಾವಾ ಆಸ್ತಿಯನ್ನು ನೋಡಿಕೊಳ್ಳಲು ವಹಿಸಿದ್ದರಿಂದ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯ ಸ್ವಾಧೀನತೆಯನ್ನು ನಾನು ಪಡೆದುಕೊಂಡಿದ್ದು ಎಂಬುದಾಗಿ ಹೇಳಿರುತ್ತೇನೆ. ದಾವಾ ಆಸ್ತಿಯ ಸ್ವಾಧೀನತೆಗೆ ಸಂಬಂದಿಸಿದಂತೆ ಪತ್ರವನ್ನು ನಾನು ಖುದ್ದು ನಿಂತು ತಯಾರಿಸಿರುತ್ತೇನೆ. ನನಗೆ 2ನೇ ಪ್ರತಿವಾದಿಯ ಪರಿಚಯ ಇಲ್ಲದೇ ಇದ್ದಿದ್ದರಿಂದ ನಾನು ಆ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿರುವುದಿಲ್ಲ. ವಾದಿ ಒಟ್ಟು 6 ಲಕ್ಷದ ಐವತ್ತು ಸಾವಿರ ರೂಗಳನ್ನು ಕೊಟ್ಟಿದ್ದು ಆ ಸಮಯದಲ್ಲಿ ನಾನು, ವಾದಿ ಮತ್ತು ಪ್ರತಿವಾದಿಗಳ ಕಡೆಯಿಂದ ಉಮೇಶಯ್ಯ, ಪ್ರತಿವಾದಿಗಳು ಮತ್ತು ಕೆಂಪಣ್ಣ ಹಾಜರಿದ್ದೆವು. ಹಣವನ್ನು ನಾನೇ ಎಣಿಸಿ ಪ್ರತಿವಾದಿಗಳಿಗೆ ಕೊಟ್ಟಿರುತ್ತೇನೆ. ಪ್ರತಿವಾದಿಗಳಿಗೆ ಕೊಟ್ಟ ಹಣದ ಮುಖಬೆಲೆ ಗೊತ್ತಿಲ್ಲ. ಆ ದಿನ ದಳ್ಳಾಳಿಯಾಗಿ ಯಾರು ಇದ್ದರು ಗೊತ್ತಿಲ್ಲ. ಆ ದಿನ ಜಮೀನನ್ನು ತೋರಿಸಿದ ಕುಮಾರ್ ರವರು ಬಂದಿರಲಿಲ್ಲ. ಆ ದಿನ ಕೆಂಪಣ್ಣ ಮತ್ತು ಊರಿನ ಪಂಚಾಯ್ತಿ ಸದಸ್ಯರಾದ ಮಹದೇವಯ್ಯರವರು ವ್ಯಾಪಾರ ಮಾಡಿಸಿದ್ದರು.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**